

بسم اللهِ الرّحمٰن الرّحيم

# ಮಕ್ಕಾ ವಿಜಯದ ದಂಡಯಾತ್ರೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹರ್ಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **20–06–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹರ್ಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಮಕ್ಕಾದ ವಿಜಯದ ಕುರಿತು ಪ್ರಸ್ತಾಪಿಸಲಾಗುತ್ತಿತ್ತು. ಈ ಯುದ್ಧಕ್ಕೆ ಹೊರಡುವ ಮೊದಲು, ಒಬ್ಬ ಸಹಾಬಿಯು ಅರಿವಿಲ್ಲದೇ ಹರ್ಝ್‌ರತ್ ಪೈಗಂಬರ್(ಸ)ರ ಈ ಪ್ರಯಾಣದ ಮಾಹಿತಿಯನ್ನು ಮಕ್ಕಾದವರಿಗೆ ತಲುಪಿಸಲು ಪ್ರಯತ್ನಿಸಿದ್ದನು ಎಂಬ ಒಂದು ಪ್ರಸ್ತಾಪವಿದೆ. ಆದರೆ ಅಲ್ಲಾಹನು ಹರ್ಝ್‌ರತ್ ಪೈಗಂಬರ್(ಸ)ರಿಗೆ ಇದರ ಕುರಿತು ಮಾಹಿತಿ ನೀಡಿದನು. ಹೀಗೆ ಹರ್ಝ್‌ರತ್ ಪೈಗಂಬರ್(ಸ)ರ ಈ ಯೋಜನೆಯ ಮಾಹಿತಿ ಅವಿಶ್ವಾಸಿಗಳಿಗೆ ತಲುಪಲಿಲ್ಲ.

ಮದೀನದಲ್ಲಿ ಮಕ್ಕಾಕ್ಕೆ ಹೋಗಲು ಸಿದ್ಧತೆಗಳು ಪ್ರಾರಂಭವಾದಾಗ, ಹಾತಬ್ ಬಿನ್ ಅಬೀ ಬಲ್ತಅ ಎಂಬ ಓರ್ವ ಬದರೀ ಸಹಾಬಿಯು ಖುರೈಶಿಯರಿಗೆ ಪತ್ರ ಬರೆದು, ಅವರ ಕಡೆಗೆ ಹೊರಡಲು ಹರ್ಝ್‌ರತ್ ಪೈಗಂಬರ್(ಸ) ಯೋಜನೆ ರೂಪಿಸಿದ್ದಾರೆ ಎಂದು ಮಾಹಿತಿ ನೀಡಲು ಪ್ರಯತ್ನಿಸಿದರು. ಅವರು ಈ ಪತ್ರವನ್ನು ಒಬ್ಬ ಮಹಿಳೆಗೆ ನೀಡಿದರು, ಆಕೆ ಈ ಪತ್ರವನ್ನು ರಹಸ್ಯವಾಗಿಟ್ಟುಕೊಂಡು ಮಕ್ಕಾದವರಿಗೆ ತಲುಪಿಸಬೇಕಾಗಿತ್ತು. ಆ ಮಹಿಳೆ ಪತ್ರವನ್ನು ತನ್ನ ಕೂದಲಿನ ಜುಟ್ಟಲ್ಲಿ ಇರಿಸಿಕೊಂಡು, ಸಾಮಾನ್ಯ ಮಾರ್ಗವನ್ನು ಬಿಟ್ಟು ಬೇರೆ ದಾರಿಯಿಂದ ಮಕ್ಕಾದ ಕಡೆಗೆ ಹೊರಟಳು.

ಅಲ್ಲಾಹನು ಈ ಪತ್ರದ ಬಗ್ಗೆ ಹರ್ಝ್‌ರತ್ ಪೈಗಂಬರ್(ಸ)ರಿಗೆ ಮಾಹಿತಿ ನೀಡಿದನು. ಆ ಪತ್ರವನ್ನು ಮರಳಿ ತರಲಿಕ್ಕಾಗಿ ಹರ್ಝ್‌ರತ್ ಪೈಗಂಬರ್(ಸ) ಹರ್ಝ್‌ರತ್ ಅಲಿ(ರ)ರನ್ನು ಕರೆದು, ಇನ್ನೊಬ್ಬ ಸಹಾಬಿಯೊಂದಿಗೆ ಅವರನ್ನು ಕಳುಹಿಸಿದರು, ಈ ಸಹಾಬಿಯರು ಆ ಮಹಿಳೆಯ ಬಳಿಗೆ ತಲುಪಿದರು ಮತ್ತು ಪತ್ರವನ್ನು ಅವಳಿಂದ ಕೇಳಿದರು. ಮೊದಲಿಗೆ ಆ ಮಹಿಳೆ ನಿರಾಕರಿಸಿದಳು, ಆದರೆ ಸ್ವಲ್ಪ ಜೋರುಮಾಡಿ ಕೇಳಲಾದಾಗ ಪತ್ರವನ್ನು ತೆಗೆದು ಕೊಟ್ಟಳು. ಹರ್ಝ್‌ರತ್ ಅಲಿ(ರ) ಮತ್ತಿತರರು ಆ ಮಹಿಳೆಯನ್ನು ಕರೆದುಕೊಂಡು ಹರ್ಝ್‌ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದರು. ಹರ್ಝ್‌ರತ್ ಹಾತಬ್ ಬಿನ್ ಅಬೀ ಬಲ್ತಅ ಹೇಳಿದರು: "ನಾನು ವಿದ್ರೋಹಿಯಲ್ಲ, ಮಕ್ಕಾದವರು ನನ್ನ ಆಸ್ತಿಪಾಸ್ತಿ ಮತ್ತು ಮಕ್ಕಳನ್ನು ಸುರಕ್ಷಿತವಾಗಿರಿಸಲಿಕ್ಕಾಗಿ ಅವರ ಮೇಲೆ ನನ್ನ ಯಾವುದಾದರೂ ಉಪಕಾರವಿರಲಿ ಎಂದು ನಾನು ಬಯಸಿದೆ. ಹರ್ಝ್‌ರತ್ ಪೈಗಂಬರ್(ಸ) ಹೇಳಿದರು: "ಇವರು ನಿಜ ಹೇಳಿದ್ದಾರೆ, ಆದ್ದರಿಂದ ನೀವು ಸಹ ಇವರ ಬಗ್ಗೆ ಒಳ್ಳೆಯ ಮಾತು ಹೊರತು ಬೇರೇನೂ ಹೇಳಬೇಡಿ. ಅನಂತರ ಹರ್ಝ್‌ರತ್ ಪೈಗಂಬರ್(ಸ) ಹರ್ಝ್‌ರತ್ ಉಮರ್(ರ)ರೊಡನೆ ಕೇಳಿದರು: "ಇವರು ಬದರ್ ಯುದ್ಧದಲ್ಲಿ ಭಾಗವಹಿಸಿರಲಿಲ್ಲವೇ?" ಇದನ್ನು ಕೇಳಿ ಹರ್ಝ್‌ರತ್ ಉಮರ್(ರ)ರಿಗೆ ಕಣ್ಣೀರು ಬಂತು. "ಅಲ್ಲಾಹನು ಮತ್ತು ಅವನ ರಸೂಲರೇ ಉತ್ತಮವಾಗಿ ಬಲ್ಲರು" ಎಂದು ಹೇಳಿದರು.

ಅನಂತರ ಹರ್ಝ್‌ರತ್ ಪೈಗಂಬರ್(ಸ) ತಮ್ಮ ಪ್ರಯಾಣವನ್ನು ಪ್ರಾರಂಭಿಸಿದರು. ಅವರು ಮುಹಾಜಿರರು (ಮಕ್ಕಾದಿಂದ ವಲಸೆ ಬಂದವರು), ಅನ್ಸಾರರು (ಮದೀನಾದ ಸ್ಥಳೀಯರು) ಮತ್ತು ಅರೇಬಿಯದ ಇತರ ಜನರೊಂದಿಗೆ ಹೊರಟರು. ಆ ವೇಳೆ ರಮಝಾನಿನ ಹತ್ತು ದಿನಗಳು ಕಳೆದಿದ್ದುವು. ಮುಸ್ನದ್ ಅಹ್ಮದ್‌ನ ವರದಿಯ ಪ್ರಕಾರ, ಹರ್ಝ್‌ರತ್ ಪೈಗಂಬರ್(ಸ) ರಮಝಾನ್ 2ರಂದು ಮದೀನಾದಿಂದ ಹೊರಟರು. ಸಹೀಹ್ ಬುಖಾರಿಯ ವ್ಯಾಖ್ಯಾನಕಾರರಾದ ಅಲ್ಲಾಮಾ ಇಬ್ನ್ ಹಜರ್ ಸಹ ರಮಝಾನ್ 2ರ ವರದಿಗೆ ಆದ್ಯತೆ ನೀಡಿದ್ದಾರೆ.

ಮದೀನಾದಿಂದ ಹೊರಡುವಾಗ ಈ ಪ್ರಯಾಣದಲ್ಲಿ ಸುಮಾರು 7,400 ತ್ಯಾಗಶಾಲಿಗಳು ಭಾಗವಹಿಸಿದ್ದರು. ದಾರಿಯಲ್ಲಿ ಈ ಸಂಖ್ಯೆ ಹೆಚ್ಚುತ್ತಾ ಹೋಯಿತು. ಕೆಲವು ಗ್ರಂಥಗಳಲ್ಲಿ ಈ ಸೈನ್ಯದ ಸಂಖ್ಯೆ 12,000 ಎಂದು ಹೇಳಲಾಗಿದೆ, ಆದರೆ ಹೆಚ್ಚಿನ ಗ್ರಂಥಗಳಲ್ಲಿ ಈ ಸಂಖ್ಯೆ 10,000 ಎಂದು ಹೇಳಲಾಗಿದೆ ಮತ್ತು ಇದೇ ಸರಿ ಎಂದು ತೋರುತ್ತದೆ.

ಈ ಪ್ರಯಾಣದಲ್ಲಿ ಹರ್ಝ್‌ರತ್ ಪೈಗಂಬರ್(ಸ)ರೊಂದಿಗೆ ಅವರ ಪರಿಶುದ್ಧ ಪತ್ನಿಯರಲ್ಲಿ ಹರ್ಝ್‌ರತ್ ಉಮ್ಮು ಸಲ್ಮಾ(ರ) ಇದ್ದರು. ಕೆಲವು ವರದಿಗಳ ಪ್ರಕಾರ, ಹರ್ಝ್‌ರತ್ ಮೈಮೂನಾ(ರ) ಸಹ ಹರ್ಝ್‌ರತ್ ಪೈಗಂಬರ್(ಸ)ರೊಂದಿಗೆ ಇದ್ದರು. ಕೆಲವು ವರದಿಗಳಲ್ಲಿ ಮಗಳು ಹರ್ಝ್‌ರತ್ ಫಾತಿಮಾ(ರ) ಸಹ ಹರ್ಝ್‌ರತ್ ಪೈಗಂಬರ್(ಸ)ರೊಂದಿಗೆ ಇದ್ದರು ಎಂದು ಉಲ್ಲೇಖಿಸಲಾಗಿದೆ. ಈ ಪ್ರಯಾಣವು ರಮಝಾನ್ ತಿಂಗಳಲ್ಲಿ ನಡೆದಿತ್ತು. ಪ್ರಯಾಣದ ಆರಂಭಿಕ ಕೆಲವು ದಿನಗಳಲ್ಲಿ ಹರ್ಝ್‌ರತ್ ಪೈಗಂಬರ್(ಸ) ಉಪವಾಸ ಇರಿಸಿದ್ದರು. ಅನಂತರ ಅವರು ಉಪವಾಸ ಇರಿಸಲಿಲ್ಲ. ಮಾತ್ರವಲ್ಲ ಉಪವಾಸ ಇರಿಸಬೇಡಿ ಎಂದು ಹರ್ಝ್‌ರತ್ ಪೈಗಂಬರ್(ಸ) ಉಳಿದ ಸಹಾಬಿಯರೊಡನೆ ಕೂಡ ಹೇಳಿದರು.

ಈ ಪ್ರಯಾಣದ ಸಮಯದಲ್ಲಿ ಜಾನುವಾರುಗಳೊಡನೆ ಸಹಾನುಭೂತಿಯ ಒಂದು ಘಟನೆ ಹೀಗೆ ವರದಿಯಾಗಿದೆ: ತಮ್ಮ ಮರಿಗಳಿಗೆ ಹಾಲು ಕುಡಿಸುತ್ತಿದ್ದ ಒಂದು ಹೆಣ್ಣು ನಾಯಿಯನ್ನು ದಾರಿಯಲ್ಲಿ ಹರ್ಝ್‌ರತ್ ಪೈಗಂಬರ್(ಸ) ಕಂಡರು. ಸೈನ್ಯದಲ್ಲಿರುವ ಯಾರೂ ಆ ನಾಯಿಗಾಗಲಿ ಅಥವಾ ಅದರ ಮರಿಗಳಿಗಾಗಲಿ

ತೊಂದರೆ ಕೊಡದೇ ಇರಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ಒಬ್ಬ ಸಹಾಬಿಯೊಡನೆ ಆ ನಾಯಿಯ ಮುಂದೆ ನಿಲ್ಲಲು ಆದೇಶಿಸಿದರು.

ಗೂಢಚಾರರನ್ನು ಹಿಡಿಯಲು ಕುದುರೆ ಸವಾರರ ಒಂದು ದಳವನ್ನು ಹಝ್ರತ್ ಪೈಗಂಬರ್(ಸ) ಮುಂದೆ ಕಳುಹಿಸಿದ್ದರು. ಬನೂ ಹವಾಝಿನಿನ ಒಬ್ಬ ಗೂಢಚಾರನನ್ನು ಈ ದಳವು ಬಂಧಿಸಿ ತಂದಿತು. ಹಝ್ರತ್ ಪೈಗಂಬರ್(ಸ) ಆತನೊಡನೆ ಕೇಳಿದಾಗ, "ಹವಾಝಿನ್ ಗೋತ್ರದವರು ನಿಮ್ಮ ವಿರುದ್ಧ ಒಟ್ಟುಗೂಡುತ್ತಿದ್ದಾರೆ" ಎಂದು ತಿಳಿಸಿದನು. ಹಝ್ರತ್ ಪೈಗಂಬರ್(ಸ) ಹೇಳಿದರು: "ಅಲ್ಲಾಹನು ನಮಗೆ ಸಾಕು ಮತ್ತು ಅವನು ಅತ್ಯುತ್ತಮ ಸಹಾಯಕನಾಗಿದ್ದಾನೆ." ಆತ ಮುಂದೆ ಹೋಗಿ ಆತನ ಜನರಿಗೆ ಮಾಹಿತಿ ನೀಡದಿರಲಿಕ್ಕಾಗಿ ಹಝ್ರತ್ ಖಾಲಿದ್ ಬಿನ್ ವಲೀದ್(ರ)ರೊಡನೆ ಆ ಗೂಢಚಾರನನ್ನು ಹಿಡಿದಿಟ್ಟುಕೊಳ್ಳುವಂತೆ ಹಝ್ರತ್ ಪೈಗಂಬರ್(ಸ) ಆದೇಶಿಸಿದರು.

ಹಝ್ರತ್ ಪೈಗಂಬರ್(ಸ) ಮುಸ್ಲಿಮರನ್ನು ಗೋತ್ರಗಳಾಗಿ ವಿಂಗಡಿಸಿ ಅವರ ಸೈನ್ಯವನ್ನು ಸಂಘಟಿಸಿದರು. ಪ್ರತಿ ಗೋತ್ರದ ಸೈನ್ಯಕ್ಕೆ ಅವರೊಳಗಿನ ಒಬ್ಬ ಅಧಿಕಾರಿಯನ್ನು ನೇಮಿಸಲಾಯಿತು. ಅನ್ಸಾರರನ್ನು ಕೌಟುಂಬಿಕ ಆಧಾರದ ಮೇಲೆ ಹನ್ನೆರಡು ದಳಗಳಾಗಿ ವಿಂಗಡಿಸಲಾಯಿತು. ಆರು ದಳಗಳು ಔಸ್‌ನಿಂದ ಮತ್ತು ಆರು ದಳಗಳು ಖಝ್ರಜ್‌ನಿಂದ ನೇಮಿಸಲಾಯಿತು. ಮುಹಾಜಿರರ ಮೂರು ಧ್ವಜಗಳು ಹಝ್ರತ್ ಅಲಿ ಬಿನ್ ಅಬೀ ತಾಲಿಬ್(ರ), ಹಝ್ರತ್ ಝುಬೈರ್ ಬಿನ್ ಅಲ್-ಅವ್ವಾಮ್(ರ) ಮತ್ತು ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ)ರ ಬಳಿ ಇದ್ದವು.

ಇದೇ ಪ್ರಯಾಣದ ಸಮಯದಲ್ಲಿ, ಹಝ್ರತ್ ಪೈಗಂಬರ್(ಸ)ರ ಸೋದರಸಂಬಂಧಿ ಮತ್ತು ದಾಯಿಕ ಸೋದರ ಹಝ್ರತ್ ಅಬೂ ಸುಫಿಯಾನ್ ಬಿನ್ ಹಾರಿಸ್ ಮತ್ತು ಅವರ ಪುತ್ರ ಜಾಫರ್ ಹಾಗೂ ಅಬ್ದುಲ್ಲಾಹ್ ಬಿನ್ ಅಬೀ ಉಮಯ್ಯ ಬಿನ್ ಮುಗೈರ ಇಸ್ಲಾಂ ಸ್ವೀಕಾರ ಮಾಡಿದ ಪ್ರಸ್ತಾಪ ಕಂಡುಬರುತ್ತದೆ. ಅವರು ಇಸ್ಲಾಮಿನ ತೀವ್ರ ವಿರೋಧಿಗಳಾಗಿದ್ದರಿಂದ ಹಝ್ರತ್ ಪೈಗಂಬರ್(ಸ)ರ ಮುಂದೆ ಬರಲು ಹೆದರುತ್ತಿದ್ದರು. ಅಬ್ದುಲ್ಲಾಹ್ ಬಿನ್ ಉಮಯ್ಯರ ಸಹೋದರಿಯಾಗಿದ್ದ ಉಮ್ಮುಲ್ ಮುಅ್‌ಮಿನೀನ್ ಹಝ್ರತ್ ಉಮ್ಮು ಸಲ್ಮಾ(ರ) ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ಹೇಳಿದರು: "ನಿಮ್ಮ ಸೋದರಸಂಬಂಧಿ ಅಬೂ ಸುಫಿಯಾನ್ ಮತ್ತು ಚಿಕ್ಕಮ್ಮನ ಪುತ್ರ ಅಬ್ದುಲ್ಲಾಹ್ ನಿಮ್ಮನ್ನು ಭೇಟಿಯಾಗಲು ಬಯಸುತ್ತಿದ್ದಾರೆ." ಹಝ್ರತ್ ಪೈಗಂಬರ್(ಸ) ಹೇಳಿದರು: "ನನಗೆ ಅವರ ಅಗತ್ಯವಿಲ್ಲ, ನಾನು ಅವರನ್ನು ಭೇಟಿಯಾಗಲು ಬಯಸುವುದಿಲ್ಲ. ನನ್ನ ಸೋದರಸಂಬಂಧಿಯಂತೂ ನನ್ನನ್ನು ಅವಮಾನಿಸಿದ್ದಾನೆ. (ಅವರು ಕವಿಯಾಗಿದ್ದರು ಮತ್ತು ಹಝ್ರತ್ ಪೈಗಂಬರ್(ಸ)ರನ್ನು ಹೀಯಾಳಿಸುತ್ತಿದ್ದರು.) ಅಬ್ದುಲ್ಲಾಹ್ ಮಕ್ಕಾದಲ್ಲಿ ಎಲ್ಲ ವಿಧದ ದೌರ್ಜನ್ಯಗಳನ್ನು ಮಾಡಿರುವನು"

ಈ ಮಾತು ಅಬೂ ಸುಫಿಯಾನ್ ಬಿನ್ ಹಾರಿಸ್‌ಗೆ ತಲುಪಿದಾಗ, ಅವರು ಬಹಳ ಭಾವುಕರಾಗಿ ಹೀಗೆ ಹೇಳಿದರು: ಹಝ್ರತ್ ಪೈಗಂಬರ್(ಸ) ನನ್ನ ಬಗ್ಗೆ ಸಮಾಧಾನಗೊಳ್ಳದಿದ್ದರೆ ಮತ್ತು ಭೇಟಿಗೆ ಅನುಮತಿ ನೀಡದಿದ್ದರೆ, ನಾನು ನನ್ನ ಮಗನೊಂದಿಗೆ ಮರುಭೂಮಿಗಳ ಕಡೆಗೆ ಹೊರಡುವೆನು ಹಾಗೂ ಹಸಿವು ಮತ್ತು ಬಾಯಾರಿಕೆಯಿಂದ ಸಾಯುವ ವರೆಗೂ ಅಲ್ಲಿ ಇರುವೆನು." ಹಝ್ರತ್ ಪೈಗಂಬರ್(ಸ)ರಿಗೆ ಈ ವಿಷಯ ಗೊತ್ತಾದಾಗ, ಅವರ ಮನಸ್ಸು ಕರಗಿತು ಮತ್ತು ಇಬ್ಬರನ್ನೂ ಕರೆದು ಅವರಿಗೆ ಭೇಟಿ ಮಾಡುವ ಸೌಭಾಗ್ಯವನ್ನು ನೀಡಿದರು.

ಹಝ್ರತ್ ಅಬೂ ಸುಫಿಯಾನ್ ಬಿನ್ ಹಾರಿಸ್(ರ) ಹಿಜರೀ 15 ಅಥವಾ 20ರಲ್ಲಿ ನಿಧನರಾದರು ಮತ್ತು ಅವರ ಜನಾಝ ನಮಾಝನ್ನು ಹಝ್ರತ್ ಉಮರ್(ರ) ನಿರ್ವಹಿಸಿದ್ದರು. ಹಝ್ರತ್ ಅಬ್ದುಲ್ಲಾಹ್ ಬಿನ್ ಅಬೀ ಉಮಯ್ಯ ಬಿನ್ ಮುಗೈರ(ರ)ರ ಹೆಸರು ಹುಧೈಫಾ ಎಂದಾಗಿತ್ತು. ಅವರು ಹಝ್ರತ್ ಪೈಗಂಬರ್(ಸ)ರ ಚಿಕ್ಕಮ್ಮ ಆತಿಕಾರ ಪುತ್ರರಾಗಿದ್ದರು. ಅವರು ಉಮ್ಮುಲ್ ಮೂಅ್‌ಮಿನೀನ್ ಹಝ್ರತ್ ಉಮ್ಮು ಸಲ್ಮಾ(ರ)ರ ಸಹೋದರರೂ ಆಗಿದ್ದರು. ಅವರು ಇಸ್ಲಾಮನ್ನು ಸ್ವೀಕರಿಸಿದ ನಂತರ, ಹುನೈನ್ ಯುದ್ಧದಲ್ಲಿ ಧೀರರಾಗಿ ಭಾಗವಹಿಸಿದರು ಮತ್ತು ತಾಇಫ್ ಯುದ್ಧದಲ್ಲಿ ಒಂದು ಬಾಣ ತಗುಲಿದ ಕಾರಣದಿಂದ ಹುತಾತ್ಮರಾದರು.

ಈ ಕಾರ್ಯಾಚರಣೆಯಲ್ಲಿ ಹಝ್ರತ್ ಅಬ್ಬಾಸ್(ರ) ಇಸ್ಲಾಮಿನ ಸೈನ್ಯಕ್ಕೆ ಸೇರಿಕೊಂಡ ಬಗ್ಗೆ ಹೀಗೆ ಬರೆಯಲಾಗಿದೆ: ಹಝ್ರತ್ ಪೈಗಂಬರ್(ಸ) ಮದೀನಾದಿಂದ ಮಕ್ಕಾ ಕಡೆಗೆ ಪ್ರಯಾಣವನ್ನು ಪ್ರಾರಂಭಿಸಿದಾಗ, ಮಕ್ಕದಲ್ಲಿದ್ದ ಹಝ್ರತ್ ಅಬ್ಬಾಸ್(ರ) ಮದೀನಾದತ್ತ ಹಿಜ್ರತ್‌ಗಾಗಿ ತಮ್ಮ ಪ್ರಯಾಣದ ಸಿದ್ಧತೆಗಳನ್ನು ಮಾಡಿಕೊಂಡರು. ಹಝ್ರತ್ ಅಬ್ಬಾಸ್(ರ) ಜುಹ್‌ಫದಲ್ಲಿ ಹಝ್ರತ್ ಪೈಗಂಬರ್(ಸ)ರನ್ನು ಭೇಟಿಯಾದರು. ಅವರು ತಮ್ಮ ಸಾಮಾನುಗಳನ್ನು ಮದೀನಾಕ್ಕೆ ಕಳುಹಿಸಿ, ಹಝ್ರತ್ ಪೈಗಂಬರ್(ಸ)ರೊಂದಿಗೆ ಮಕ್ಕಾದ ಕಡೆಗೆ ಹೊರಟರು. ಅವರು ಹಝ್ರತ್ ಪೈಗಂಬರ್(ಸ)ರ ಚಿಕ್ಕಪ್ಪರಾಗಿದ್ದರು ಮತ್ತು ಹಝ್ರತ್ ಪೈಗಂಬರ್(ಸ)ಗಿಂತ ಎರಡು ಅಥವಾ ಮೂರು ವರ್ಷ ದೊಡ್ಡವರಾಗಿದ್ದರು. ಅವರು ತಮ್ಮ ಪುತ್ರನಾದ ಫಝ್ಲ್ ಬಿನ್ ಅಬ್ಬಾಸರ ಕಾರಣದಿಂದ 'ಅಬುಲ್ ಫಝ್ಲ್' ಎಂಬ ಉಪನಾಮದಿಂದ ಪರಿಚಿತರಾಗಿದ್ದರು. ಹಝ್ರತ್ ಅಬೂ ತಾಲಿಬ್‌ರ ನಂತರ, ಹಾಜಿಗಳಿಗೆ ನೀರು ಕುಡಿಸುವ ಜವಾಬ್ದಾರಿ ಅವರದ್ದಾಗಿತ್ತು. ಅವರು ಹುನೈನ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ)ರೊಂದಿಗೆ ಸ್ಥಿರಚಿತ್ತರಾಗಿ ನಿಂತಿದ್ದರು. ಹಿಜರಿ 32 ಅಥವಾ 33ರಲ್ಲಿ ಅವರು ನಿಧನ ಹೊಂದಿದರು.

ಹಝ್ರತ್ ಪೈಗಂಬರ್(ಸ)ರ ಉತ್ತಮ ಸೇನಾ ತಂತ್ರಗಾರಿಕೆ ಮತ್ತು ದುಆಗಳ ಕಾರಣದಿಂದ ಎಂತಹ ಮಹಾ ಅದ್ಭುತ ನಡೆಯಿತು ಎಂದರೆ ಮದೀನಾದಿಂದ ಹೊರಟ ಹತ್ತು ಸಾವಿರ ಸೈನಿಕರ ಸೈನ್ಯವು ಸುಮಾರು 400 ಕಿಲೋಮೀಟರ್ ದೂರ ಪ್ರಯಾಣಿಸಿ ಮಕ್ಕಾದಿಂದ ಕೇವಲ ಐದು ಮೈಲಿಗಳ ದೂರದಲ್ಲಿ ಡೇರೆ ಹಾಕಿದ್ದರೂ ಕೂಡ ಮಕ್ಕಾದವರಿಗೆ ಅದರ ಸುದ್ದಿ ತಲುಪಲಿಲ್ಲ.

ಹಝ್ರತ್ ಪೈಗಂಬರ್(ಸ) ಇಶಾ ನಮಾಝ್ ಸಮಯದಲ್ಲಿ ಮಕ್ಕಾದಿಂದ ಐದು ಮೈಲಿ ದೂರದಲ್ಲಿರುವ ಮರ್‌ರುಝ್‌ಹ್‌ರಾನ್‌ನಲ್ಲಿ ಡೇರೆ ಹಾಕಿದರು. ಅನಂತರ ಹಝ್ರತ್ ಪೈಗಂಬರ್(ಸ) ಸಹಾಬಿಯರಿಗೆ ಆದೇಶ ನೀಡಿದಾಗ, ಅವರು ಹತ್ತು ಸಾವಿರ ಅಗ್ನಿ

ಕುಂಡಗಳನ್ನು ಬೆಳಗಿಸಿದರು. ಹಝ್ರತ್ ಪೈಗಂಬರ್(ಸ) ಹಝ್ರತ್ ಉಮರ್(ರ)ರಿಗೆ ಸೈನ್ಯದ ಮೇಲ್ನೋಟವನ್ನು ವಹಿಸಿಕೊಟ್ಟರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: "ಅಹ್ಝಾಬಿನ ಘಟನೆಯನ್ನು ಹೊರತುಪಡಿಸಿ, ಅರಬ್ ಚರಿತ್ರೆಯಲ್ಲಿ ಇಷ್ಟು ದೊಡ್ಡ ಸೈನ್ಯವನ್ನು ಎಂದಿಗೂ ಸಿದ್ಧಪಡಿಸಲಾಗಿರಲಿಲ್ಲ. ಅಹ್ಝಾಬ್‌ನಲ್ಲಿ ಹತ್ತು–ಹನ್ನೆರಡು ಸಾವಿರ ಜನರಿದ್ದರು. ಹೀಗೆ ಇದು ಅರಬ್ ಇತಿಹಾಸದಲ್ಲಿ ಇಷ್ಟು ದೊಡ್ಡ ಸೈನ್ಯದ ಎರಡನೇ ಉದಾಹರಣೆಯಾಗಿತ್ತು. ಆದರೆ ಮದೀನಾದಿಂದ ಇಷ್ಟು ದೊಡ್ಡ ಸೈನ್ಯ ಹೊರಡುತ್ತದೆ ಮತ್ತು ಯಾರಿಗೂ ಅದರ ಸುಳಿವು ಕೂಡ ಇರುವುದಿಲ್ಲ. ಹೀಗೆ "ನಾನು ನನ್ನ ನಗಾರಿಯನ್ನು ಬಾರಿಸುತ್ತೇನೆ ಮತ್ತು ಅವರ ನಗಾರಿಯನ್ನು ಒಡೆದು ಹಾಕುತ್ತೇನೆ' ಎಂದು ಅಲ್ಲಾಹನು ಅದ್ಭುತವಾಗಿ ತೋರಿಸಿದನು. ಹಝ್ರತ್ ಪೈಗಂಬರ್(ಸ) ಮದೀನದಿಂದ ಹೊರಡುವಾಗಲೇ ಅವರು ಹೀಗೆ ದುಆ ಮಾಡಿದ್ದರು: ಹೇ ನನ್ನ ಪ್ರಭೂ, ನೀನು ಮಕ್ಕಾದವರ ಕಿವಿಗಳನ್ನು ಕಿವುಡಾಗಿಸು ಮತ್ತು ಅವರ ಗೂಢಚಾರರನ್ನು ಕುರುಡಾಗಿಸು ಎಂದು ನಾನು ದುಆ ಮಾಡುತ್ತೇನೆ. ಅವರು ನಮ್ಮನ್ನು ನೋಡದಿರಲಿ ಮತ್ತು ನಮ್ಮ ಯಾವುದೇ ಮಾತು ಅವರ ಕಿವಿಗೆ ತಲುಪದಿರಲಿ.

ಮದೀನಾದಲ್ಲಿ ನೂರಾರು ಕಪಟವಿಶ್ವಾಸಿಗಳು ಇದ್ದರು, ಆದರೆ ಹತ್ತು ಸಾವಿರ ಸೈನಿಕರ ದಂಡು ಮದೀನಾದಿಂದ ಹೊರಡುವಾಗ ಮಕ್ಕಾದವರಿಗೆ ಅದರ ಯಾವುದೇ ಸುದ್ದಿ ತಲುಪಲಿಲ್ಲ. ಹಝ್ರತ್ ಪೈಗಂಬರ್(ಸ) ದಾಳಿ ಮಾಡಬಹುದು ಎಂದು ಮಕ್ಕಾದವರು ನಿಸ್ಸಂದೇಹವಾಗಿಯೂ ಚಿಂತಿತರಾಗಿದ್ದರು, ಆದರೆ ಹಝ್ರತ್ ಪೈಗಂಬರ್(ಸ) ಇಷ್ಟು ದೊಡ್ಡ ಸೈನ್ಯದೊಂದಿಗೆ ಅವರ ಹತ್ತಿರ ತಲುಪಿದ್ದಾರೆ ಎಂದು ಅವರಿಗೆ ಅಂದಾಜು ಮಾಡಲು ಸಾಧ್ಯವಾಗಲಿಲ್ಲ. ಮಕ್ಕಾದವರು ಅಪಾಯದ ದೃಷ್ಟಿಯಿಂದ ರಾತ್ರಿಗಳಲ್ಲಿ ಸುತ್ತಮುತ್ತ ಗಸ್ತು ತಿರುಗುತ್ತಿದ್ದರು. ಅದರಂತೆ ಒಂದು ರಾತ್ರಿ ಅಬೂ ಸುಫಿಯಾನ್ ತನ್ನ ಇಬ್ಬರು ಸಂಗಾತಿಗಳಾದ ಹಕೀಮ್ ಬಿನ್ ಹಿಝಾಮ್ ಮತ್ತು ಇನ್ನೊಬ್ಬ ನಾಯಕನೊಂದಿಗೆ ಗಸ್ತು ತಿರುಗುತ್ತಿದ್ದರು. ಆಗ ಅವರು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಬೆಂಕಿಗಳನ್ನು ನೋಡಿ ಅಂದಾಜು ಮಾಡಲು ತೊಡಗಿದರು. ಈ ಬೆಂಕಿಗಳು ಅಬೂ ಸುಫಿಯಾನ್ ಮತ್ತು ಅವನ ಸಂಗಾತಿಗಳಿಗೆ ಭಯವನ್ನುಂಟುಮಾಡಿದವು. ಅವರು ಈ ವಿಷಯಗಳ ಬಗ್ಗೆ ಮಾತನಾಡುತ್ತಿದ್ದಾಗಲೇ ಹಝ್ರತ್ ಪೈಗಂಬರ್(ಸ)ರ ಗೂಢಚಾರರು ಅವರನ್ನು ಹಿಡಿದು, ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಹಾಜರುಪಡಿಸಲು ಕರೆದುಕೊಂಡು ಹೋದರು.

(ಈ ವಿಷಯ ಮುಂದುವರಿಯುವುದು ಎಂದು ಹುಝೂರ್ ಹೇಳಿದರು.)

ಖುತ್ಬದ ಕೊನೆಯಲ್ಲಿ, ದುಆಗಳ ಕಡೆಗೆ ಗಮನ ಸೆಳೆಯುತ್ತಾ ಹುಝೂರ್ ಹೇಳಿದರು:

ನಾನು ಯಾವಾಗಲೂ ಹೇಳುವಂತೆ, ದುಆಗಳ ಕಡೆಗೆ ಗಮನ ನೀಡುತ್ತಾ ಇರಿ. ಅಲ್ಲಾಹನು ಲೋಕವನ್ನು ಕಲಹಗಳಿಂದ ರಕ್ಷಿಸಲಿ. ಪರಿಸ್ಥಿತಿಗಳು ಮೇಲೆ ಕೆಳಗೆ ಆಗುತ್ತಿವೆ. ಅಲ್ಲಾಹನು ಅದನ್ನು ಉತ್ತಮಗೊಳಿಸಲಿ, ಅದು ಉತ್ತಮ ಸ್ಥಿತಿಗೆ ಸಾಗಲಿ. ಮತ್ತಷ್ಟು ವಿನಾಶದ ಕಡೆಗೆ ಸಾಗದಿರಲಿ.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَا هَادِيَ لَهٗ ۔ وَنَشْهَدُ اَنْ لَّا اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِی الْقُرْبٰی

وَيَنْهٰی عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis**(atba)*

At, ***'Masjid Mubarak',*** *Islamabad, Tilford,* U.K. On 20-06-2025

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim | ***Layout**:* Basheer K.P. Manjeshwar

***Published By**:* Kannada Isha'at Team for Nazarath Nashr-O-Isha'ath, Qadian



***Email**: khutuba.kannada@gmail.com*



**You can find all the Sermons archived at**: www.alislam.org/friday-sermon